ಗರ್ಭಧಾರಣೆ ತಡೆಯಲು ಚುಚ್ಚುಮದ್ದು

1549 - ಶ್ರೀ ಜಿ. ರಾಜುಗೌಡ (ಹನೂರು) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭಾರತದಲ್ಲಿ ಹೆಣ್ಣು ಮಕ್ಕಳ ಗರ್ಭಧಾರಣೆ ತಡೆಯಲಿಕ್ಕೆ ಚುಚ್ಚುಮದ್ದು ಸಿದ್ಧಪಡಿಸಲಾಗಿದೆಯೇ?

ಆ) ಹಾಗಿದ್ದಲ್ಲಿ ಇದರ ಹೆಸರೇನು? ಸಾರ್ವಜನಿಕ ಬಳಕೆಗೆ ಸಿದ್ಧವಾಗಿದೆಯೇ?

ಇ) ಟುಬೆಕ್ಟಮಿ ಶಸ್ತ್ರಚಿಕಿತ್ಸೆ ಬದಲು ಚುಚ್ಚುಮದ್ದನ್ನು ಬಳಸಲಾಗುವುದೇ?

ಈ) ಹಾಗಿದ್ದಲ್ಲಿ ಎಂದಿನಿಂದ ಅದನ್ನು ಜಾರಿಗೆ ತರಲಾಗುವುದು?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಇಲ್ಲ.

ಆ) ಈ ಮೇಲೆ ನೀಡಿರುವ ಉತ್ತರದಿಂದ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಕುಟುಂಬ ಕಲ್ಯಾಣ ಯೋಜನೆಗಳು

1552 - ಶ್ರೀ ಜಿ. ರಾಜುಗೌಡ (ಹನೂರು) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅವಶ್ಯವಿರುವ ಸಲಕರಣೆಗಳನ್ನು ಕೊಳ್ಳಲು ಹಣವಿಲ್ಲದ ಕಾರಣ ಕುಟುಂಬ ಕಲ್ಯಾಣ ಯೋಜನೆಗಳು ಸ್ಥಗಿತಗೊಂಡಿದೆಯೇ?

ಆ) ಹಾಗಿದ್ದಲ್ಲಿ 1989-90 ರ ಫೆಬ್ರವರಿ 15ರೊಳಗೆ ರಾಜ್ಯದಲ್ಲಿ ಎಷ್ಟು ಪುರುಷರು ಎಷ್ಟು ಮಹಿಳೆಯರು ಕುಟುಂಬ ಕಲ್ಯಾಣ ಯೋಜನೆಗೆ ಒಳಗಾಗಿದ್ದರು?

ಇ) 1990-91 ಸಾಲಿನ ಫೆಬ್ರವರಿ 15 ರೊಳಗೆ ಎಷ್ಟು ಜನ ಈ ಯೋಜನೆಯ ಸೌಲಭ್ಯ ಪಡೆದಿದ್ದಾರೆ?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಸ್ಥಗಿತಗೊಂಡಿಲ್ಲ.

ಆ) 1989ರ ಏಪ್ರಿಲ್ 1 ರಿಂದ ಫೆಬ್ರವರಿ 1990ರ ಅಂತ್ಯದವರೆಗೆ ಸಾಧಿಸಿದ ಪ್ರಗತಿಯನ್ನು ಕೆಳಗೆ ಕೊಡಲಾಗಿದೆ.

1) ಪುರುಷ ಶಸ್ತ್ರಚಿಕಿತ್ಸೆ	1910
2) ಮಹಿಳಾ ಶಸ್ತ್ರಚಿಕಿತ್ಸೆ	259899
3) ಒಟ್ಟು	261809

ಇ) 1990ರ ಏಪ್ರಿಲ್ 1 ರಿಂದ ಫೆಬ್ರವರಿ 1991 ಅಂತ್ಯದವರೆಗೆ ಸಾಧಿಸಿದ ಪ್ರಗತಿಯನ್ನು ಕೆಳಗೆ ಕಂಡಂತಿದೆ :

1) ಪುರುಷ ಶಸ್ತ್ರಚಿಕಿತ್ಸೆ	1006
2) ಮಹಿಳಾ ಶಸ್ತ್ರಚಿಕಿತ್ಸೆ	256386
3) ಒಟ್ಟು	257392